CC No.:168/2018
P.W.:1

ಈ ದಿನ ದಿಃ19.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ವಕೀಲರಾದ ಶ್ರೀ ಹೆಚ್.ಬಿ.ಸಿ ರವರಿಂದಃ-**

ನಿಮ್ಮ ದೂರು, ವಕೀಲರ ನೋಟಿಸ್ ಮತ್ತು ಪ್ರಮಾಣ ಪತ್ರದಲ್ಲಿ ನೀವು ಬಡ್ಡಿ ವ್ಯವಹಾರ ಮಾಡುತ್ತೇನೆಂಬ ಸಂಗತಿಯನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನೇ ಹೇಳಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ನನಗೆ ಬೇರೆಯವರ ಮೂಲಕ ಪರಿಚಯ ಆಗಿಲ್ಲ ನೇರವಾಗಿಯೇ ಪರಿಚಯವಾಗಿರುತ್ತಾರೆ. ಆರೋಪಿ ನಿಮಗೆ ಎಲ್ಲಿ ಪರಿಚಯ ಆದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಮ್ಮದು ಬೇಕರಿ ವ್ಯವಹಾರ ಇತ್ತು, ಅದರ ಮೂಲಕ ಪರಿಚಯವಾಗಿರುತ್ತಾರೆ ಎಂದು ನುಡಿಯುತ್ತಾರೆ. 20ವರ್ಷಗಳ ಹಿಂದೆ ಆರೋಪಿ ನಿಮಗೆ ಪರಿಚಯವಾದಾಗ ಆರೋಪಿಗೆ ಎಷ್ಟು ವರ್ಷ ವಯಸ್ಸು ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 25 ರಿಂದ 30ವರ್ಷ ವಯಸ್ಸು ಇದ್ದಿರಬಹುದು ಎಂದು ನುಡಿಯುತ್ತಾರೆ. 20ವರ್ಷಗಳ ಹಿಂದೆ ಆರೋಪಿಗೆ ಕೇವಲ 17ವರ್ಷಗಳು ಮಾತ್ರ ವಯಸ್ಸು ಇತ್ತು ಎಂದರೆ ಸರಿಯಲ್ಲ.

ಆರೋಪಿ ನಿಮಗೆ ಪರಿಚಯವಾದ ಕಾಲಕ್ಕೆ ಅವರು ಪಿಡಿಓ ಆಗಿದ್ರ ಎಂದು

ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು, ಆಗಿದ್ದರು ಎಂದು ನುಡಿಯುತ್ತಾರೆ. 6 ತಿಂಗಳ ನಂತರ ನೀವು ಏನಾದರೂ ಆರೋಪಿಯ ಮನೆಗೆ ಹಣ ಕೇಳಲು ಹೋಗಿದ್ರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು ಹೋಗಿದ್ದೆ ಎಂದು ನುಡಿಯುತ್ತಾರೆ. ಆರೋಪಿ ಯಾವ ಕಾರಣಕ್ಕೆ ನನ್ನಿಂದ ಹಣವನ್ನು ಸಾಲವಾಗಿ ತೆಗೆದುಕೊಳ್ಳುತ್ತಿದ್ದಾರೆ ಎಂಬ ಬಗ್ಗೆ ಕಾರಣವನ್ನು ನಿಮಗೆ ತಿಳಿಸಿದ್ರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು Personal problem ಗಾಗಿ ಹಣ ಬೇಕಾಗಿದೆ ಎಂದು ನನಗೆ ಹೇಳಿದ್ದರು, ಅದು ಯಾವ problem ಎಂಬ ಬಗ್ಗೆ ಖಚಿತವಾಗಿ ನನಗೆ ಹೇಳಿರಲಿಲ್ಲ ಎಂದು ನುಡಿಯುತ್ತಾರೆ.

ನನ್ನ ಗಂಡನ ಬೇಕರಿ ವ್ಯವಹಾರದ ಆದಾಯಕ್ಕೆ ಸಂಬಂಧಿಸಿದಂತೆ ಇರುವ ದಾಖಲೆಗಳನ್ನು ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ. ನಾನು ಆ ದಿನ ಆರೋಪಿಗೆ 500 ರೂಪಾಯಿ ಮುಖಬೆಲೆಯ ಹಣವನ್ನು ಕೊಟ್ಟಿರುತ್ತೇನೆ. ಆರೋಪಿ ಕೊಟ್ಟಂತಹ ನಾಲ್ಕು ಚೆಕ್ಕುಗಳಲ್ಲಿ ಯಾವ ಯಾವ ಚೆಕ್ಕುಗಳಲ್ಲಿ ಎಷ್ಟು ಎಷ್ಟು ಮೊತ್ತದ ಹಣವನ್ನು ಬರೆದರು ಎಂಬ ಬಗ್ಗೆ ನಿಮಗೆ ಗೊತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಕೊಟ್ಟಂತಹ ಚೆಕ್ಕುಗಳನ್ನು ನಾನು ನಗದೀಕರಣಕ್ಕಾಗಿ ಎಷ್ಟು ಬಾರಿ ಸಲ್ಲಿಸಿರುತ್ತೇನೆಂದು ನನಗೆ ಗೊತ್ತಿಲ್ಲ.

ನನಗೆ ಸಂಬಂಧಿಸಿದ ಬ್ಯಾಂಕ್ ಖಾತೆಯು ಕಾರ್ಪೊರೇಷನ್ ಬ್ಯಾಂಕಿನಲ್ಲಿದೆ.

ಇದನ್ನು ಹೊರತುಪಡಿಸಿ ಬೇರೆ ಬ್ಯಾಂಕ್ ಖಾತೆ ನನಗೆ ಇರುವುದಿಲ್ಲ. ದಿನಾಂಕ.04.12.2017ರ ನೋಟಿಸ್ಸಿ ಗೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮುತ್ತುಟ್ ಬ್ಯಾಂಕಿನಿಂದ ಸಾಲ ತೆಗೆದುಕೊಂಡಿದ್ದೆ ಎಂದು ತೋರಿಸಲು ಅದರ ಸ್ಟೇಟ್ ಮೆಂಟನ್ನು ಈ ಪ್ರಕರಣದಲ್ಲಿ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಆರೋಪಿತಳ ಮದುವೆಗೆ ನಾನು ಹೋಗಿಲ್ಲ. ಆರೋಪಿಯ ಮನೆಯವರು ನಿಮಗೆ ಯಾರು ಯಾರು ಪರಿಚಯ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆರೋಪಿಯ ಮಾವ ಮತ್ತು ಆರೋಪಿಯ ನಾದಿನಿ ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ನಿಪಿ-11 ರಿಂದ ನಿಪಿ-13ರಂತೆ ಇರುವ ದಾಖಲೆಗಳನ್ನು ಯಾವ ಕಾರಣಕ್ಕಾಗಿ ಈ ಪ್ರಕರಣದಲ್ಲಿ ಸಲ್ಲಿಸಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ನ್ಯಾಯ ಸಿಗಲಿ ಎಂಬ ಕಾರಣಕ್ಕೆ ಸಲ್ಲಿಸಿರುತ್ತೇನೆಂದು ನುಡಿಯುತ್ತಾರೆ. ನಿಪಿ-11 ರಿಂದ ನಿಪಿ-13ರಂತೆ ಇರುವ ದಾಖಲೆಗಳು ಯಾವ ರೀತಿಯ ಸ್ಟೇಟ್ಮೆಂಟ್ ಗಳು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಪಿ-11 ರಿಂದ ನಿಪಿ-13ರ ಪ್ರಕಾರ ನಾನು ಒಟ್ಟು 15 ರಿಂದ 20 ಲಕ್ಷ ರೂಪಾಯಿಯಷ್ಟು ಗೋಲ್ಡ್ ಲೋನ್ ಪಡೆದುಕೊಂಡಿರುತ್ತೇನೆ. ಸದರಿ ಗೋಲ್ಡ್ ಲೋನನ್ನು ನಾನು 2016 ಮತ್ತು 2017ನೇ ಸಾಲಿನಲ್ಲಿ ಪಡೆದುಕೊಂಡಿರುತ್ತೇನೆ, ಆದರೆ

ದಿನಾಂಕವನ್ನು ಖಚಿತವಾಗಿ ಹೇಳಲು ಆಗುವುದಿಲ್ಲ. 15 ರಿಂದ 20 ಲಕ್ಷ ರೂಪಾಯಿಯಷ್ಟು ಗೋಲ್ಡ್ ಲೋನ್ ಪಡೆದುಕೊಂಡಿರುತ್ತೇನೆಂದು ತೋರಿಸಲು ಇರುವಂತಹ ಎಲ್ಲಾ ದಾಖಲೆಗಳನ್ನು ನೀವು ಈ ಪ್ರಕರಣದಲ್ಲಿ ಹಾಜರುಪಡಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ನಿಪಿ-11 ರಿಂದ ನಿಪಿ-13ರಂತೆ ಇರುವ ದಾಖಲೆಗಳು ಸೆಪ್ಟೆಂಬರ್ 2017 ಮತ್ತು ನವೆಂಬರ್ 2017ನೇ ಸಾಲಿಗೆ ಸಂಬಂಧಿಸಿದವುಗಳು ಎಂದರೆ ಸಾಕ್ಷಿಯು ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಪಿ-11 ರಿಂದ ನಿಪಿ-13ಕ್ಕೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಪಡೆದುಕೊಂಡಂತಹ ಗೋಲ್ಡ್ ಲೋನಿನ ಸಂಪೂರ್ಣ ಹಣವನ್ನು ನಾನು ನನ್ನ ಗಂಡನಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಗೋಲ್ಡ್ ಲೋನಿನ ಸಂಪೂರ್ಣ ಹಣವನ್ನು ನಾನು ನನ್ನ ವ್ಯವಹಾರಕ್ಕೆ ಮಾತ್ರ ಬಳಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

2017ನೇ ಸಾಲಿನ ಜೂನ್-ಜುಲೈ ತಿಂಗಳಲ್ಲಿ ನನ್ನ ಬಳಿ 15ಲಕ್ಷ ರೂಪಾಯಿ ಹಣ ಇತ್ತು ಎಂದು ತೋರಿಸಲು ನಾನು ಈ ಪ್ರಕರಣದಲ್ಲಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು

ಆರೋಪಿಗೆ ಹಣವನ್ನು ನಗದಾಗಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ನಿಪಿ-14ರಂತೆ ಇರುವ ದಾಖಲೆಯು ಯಾವ ವರ್ಷಕ್ಕೆ ಸಂಬಂಧಿಸಿದ್ದು ಎಂದು ನನಗೆ ಹೇಳಲು ಆಗುವುದಿಲ್ಲ. ಲೇವಾದೇವಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಕೆಲವೊಂದು ನಿಯಮಗಳು ಇರುತ್ತವೆ, ಆ ನಿಯಮಗಳ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಕೆಲವೊಂದು ನಿಯಮಗಳ ಬಗ್ಗೆ ಮಾಹಿತಿ ಇದೆ, ಕೆಲವೊಂದು ನಿಯಮಗಳ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಲೇವಾದೇವಿ ಪರವನಾಗಿಯ ಅಡಿಯಲ್ಲಿ ಲೇವಾದೇವಿ ವ್ಯವಹಾರವನ್ನು ನೀವು ನಡೆಸುತ್ತಿದ್ದೀರೋ ಅಥವಾ ನಿಮ್ಮ ಗಂಡ ನಡೆಸುತ್ತಿದ್ದರೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ನಡೆಸುತ್ತಿದ್ದೇನೆ ಎಂದು ನುಡಿಯುತ್ತಾರೆ.

ಲೇವಾದೇವಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಪ್ರತಿವರ್ಷ ನಾವು ಅಡಿಟ್ ಮಾಡಿಸಿ ತೆರಿಗೆ ಕಟ್ಟಬೇಕು ಎಂದರೆ ಸರಿ. ಈ ರೀತಿ ಅಡಿಟ್ ಮಾಡಿಸಲು ಮತ್ತು ಟ್ಯಾಕ್ಸ್ ಕಟ್ಟಲು ನಾವು ಲೇವಾದೇವಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಒಂದು ಲೆಡ್ಜರ್ ಪಾಲಿಸಬೇಕು ಎಂದರೆ ಸರಿ. ಸದರಿ ಲೆಡ್ಜರ್ ನಲ್ಲಿ ಯಾರು ಯಾರಿಗೆ ಎಷ್ಟು ಎಷ್ಟು ಮೊತ್ತದ ಹಣ ಸಾಲವಾಗಿ ಕೊಟ್ಟಿರುತ್ತೇವೆ ಎಂಬ ಬಗ್ಗೆ ಲೆಡ್ಜರ್ ನಲ್ಲಿ ನಮೂದು ಮಾಡಬೇಕು ಎಂದರೆ ಸರಿ. 2016-2017ನೇ ಸಾಲಿಗೆ ಸಂಬಂಧಿಸಿದಂತೆ ನಾವು ಇಟ್ಟುಕೊಂಡಂತಹ ಲೆಡ್ಜರ್ ನ್ನು ಮತ್ತು ಅಡಿಟ್ ವರದಿ ಹಾಗೂ ಟ್ಯಾಕ್ಸ್ ಕಟ್ಟಿದ ಬಗ್ಗೆ ಇರುವ ದಾಖಲೆಗಳನ್ನು ಈ ಪ್ರಕರಣದಲ್ಲಿ ನಾನು

ಹಾಜರುಪಡಿಸಿರುತ್ತೇನೆ.

ನಾನು ಲೇವಾದೇವಿ ವ್ಯವಹಾರ ಮಾಡುತ್ತಿರುವ ಕಾರಣಕ್ಕೆ ಯಾರಿಗೆ ಆದರೂ ಹಣವನ್ನು ಸಾಲವಾಗಿ ಕೊಟ್ಟರೆ ಬಡ್ಡಿಯ ಆಧಾರದ ಮೇಲೆಯೇ ಕೊಡುತ್ತೇನೆ ಎಂದರೆ ಸರಿ. ನಿಮ್ಮ ಬೇಕರಿ ಅಂಗಡಿಯ ಸಮೀಪ ಇರುವ ಅಂಗಡಿ ಶಿವಣ್ಣ ರವರ ಮಗ ರವಿಕಿರಣ್ ನಿಮಗೆ ಪರಿಚಯನಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಅವರು ಕೋರ್ಟಿನಲ್ಲಿ ಪರಿಚಯವಾಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ರವಿಕಿರಣ್ ರವರು ನನ್ನ ಗಂಡನಿಗೆ ಪರಿಚಯವೋ ಇಲ್ಲವೋ ನನಗೆ ಗೊತ್ತಿಲ್ಲ.

ನಿಮ್ಮ ಗಂಡ ವೆಂಕಟೇಶ್ವರ ಬೇಕರಿಯನ್ನು ಸುಮಾರು 25ವರ್ಷಗಳಿಂದ ನಡೆಸುತ್ತಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅದಕ್ಕೂ ಹೆಚ್ಚಿ ಗೆ ವರ್ಷ ಆಗಿರಬಹುದು ಎಂದು ನುಡಿಯುತ್ತಾರೆ. ರವಿಕಿರಣ್ ಎನ್ನುವವರು ಸಹ ನಮ್ಮ ಬೇಕರಿ ಅಂಗಡಿಯ ಸಮೀಪದಲ್ಲಿಯೇ ಸುಮಾರು 30-40ವರ್ಷಗಳಿಂದ ವಾಸವಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಬೇಕರಿಗೆ ಹೋಗುವುದಿಲ್ಲ. ರವಿಕಿರಣ್ ರವರು ಆರೋಪಿಯ ವಿರುದ್ದ ಕೇಸು ಹಾಕಿರುವ ವಿಚಾರ ನನಗೆ ಗೊತ್ತಿಲ್ಲ.

ನನ್ನ ಗಂಡ ಹಾಗೂ ರವಿಕಿರಣ್ ರವರು ಹಾರೋಹಳ್ಳಿಯಲ್ಲಿಯೇ ಹುಟ್ಟಿ

ಬೆಳೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ಹಾರೋಹಳ್ಳಿಯಲ್ಲಿಯೇ ಹುಟ್ಟಿ ಬೆಳೆದಿರುತ್ತಾರೆ ಎಂದರೆ ಸರಿ. ನನ್ನ ಗಂಡ ಮತ್ತು ರವಿಕಿರಣ್ ರವರು ಒಳ್ಳೆಯ ಸ್ನೇಹಿತರಾದ ಕಾರಣಕ್ಕೆ ಸದರಿ ರವಿಕಿರಣ್ ರವರು ಆರೋಪಿಯ ಮೇಲೆ ಇರುವಂತಹ ದ್ವೇಷದಿಂದಾಗಿ ಆಕೆಗೆ ಸಂಬಂಧಿಸಿದ ಚೆಕ್ಕನ್ನು ನನ್ನ ಗಂಡನಿಗೆ ಕೊಟ್ಟು ನನ್ನ ಗಂಡನು ನನ್ನ ಮೂಲಕ ಈ ಸುಳ್ಳು ಕೇಸನ್ನು ಆರೋಪಿಯ ವಿರುದ್ದ ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1, ನಿಪಿ-2, ನಿಪಿ-15 ಮತ್ತು ನಿಪಿ-16ರಲ್ಲಿರುವ ಬರವಣಿಗೆಗಳು ಮತ್ತು ಸಹಿ ಯಾವುದು ಆರೋಪಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ನಮಗೂ ಆರೋಪಿಗೂ ಯಾವುದೇ ಪರಿಚಯವಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇಲ್ಲದೆ ಇದ್ದರು ನನ್ನ ಗಂಡನ ಮಾತು ಕೇಳಿ ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಆರೋಪಿಗೆ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ ಈ ಸುಳ್ಳು ಕೇಸನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿದ ದಾಖಲೆಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹಾಜರುಪಡಿಸಿದ ಎಲ್ಲಾ ದಾಖಲೆಗಳನ್ನು ಈ ಪ್ರಕರಣಕೋಸ್ಕರವೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

CC No.:168/2018

P.W.:1

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**